# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 130 |
| ಸದಸ್ಯರ ಹೆಸರು | : | ಶ್ರೀ ಎನ್ ಎಸ್ ಬೋಸರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 02.03.2020 |
| ಉತ್ತರಿಸುವವರು | : | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಇರುವ ಒಟ್ಟು ಶೇಕಡವಾರು ಅರಣ್ಯ ಪ್ರದೇಶ ಎಷ್ಟು;</td><td>ರಾಜ್ಯದಲ್ಲಿ ಒಟ್ಟು ಶೇ.22.00ರಷ್ಟು ಅರಣ್ಯ ಪ್ರದೇಶ ಇರುತ್ತದೆ.</td></tr>
<tr><td>ಆ)</td><td>ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಇರುವ ಶೇಕಡವಾರು ಒಟ್ಟು ಅರಣ್ಯ ಪ್ರದೇಶ ಎಷ್ಟು;</td><td>ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಇರುವ ಶೇಕಡವಾರು ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತಿದೆ
<table>
<tr><th>ಕ್ರಮ ಸಂ.</th><th>ಅರಣ್ಯ ವಿಭಾಗ</th><th>ಅರಣ್ಯ ವಿಸ್ತೀರ್ಣ (ಚ.ಕಿ.ಮೀ ಗಳಲ್ಲಿ)</th><th>ಒಟ್ಟು ಭೂಪ್ರದೇಶದಲ್ಲಿರುವ ಶೇಕಡವಾರು ಅರಣ್ಯ ಪ್ರದೇಶ</th></tr>
<tr><td>1</td><td>ಕಲಬುರಗಿ</td><td>359.7800</td><td>3.270</td></tr>
<tr><td>2</td><td>ಯಾದಗಿರಿ</td><td>489.0577</td><td>5.300</td></tr>
<tr><td>3</td><td>ರಾಯಚೂರು</td><td>351.4852</td><td>4.190</td></tr>
<tr><td>4</td><td>ಬೀದರ್</td><td>332.2554</td><td>8.040</td></tr>
<tr><td colspan="2">ಒಟ್ಟು</td><td>1532.5783</td><td>4.630</td></tr>
</table></td></tr>
<tr><td>ಇ)</td><td>ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಶೇಕಡವಾರು ಅರಣ್ಯ ಪ್ರದೇಶ ಎಷ್ಟು;</td><td>ರಾಯಚೂರು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 8,38,600 ಹೆಕ್ಟರ್ ಇದ್ದು, 35,148.52 ಹೆಕ್ಟರ್ ಅರಣ್ಯ ಪ್ರದೇಶವಿರುತ್ತದೆ. ಒಟ್ಟು ಭೂಪ್ರದೇಶದ ಶೇ.4.19 ರಷ್ಟು ಅರಣ್ಯ ಪ್ರದೇಶ ಇರುತ್ತದೆ.</td></tr>
<tr><td>ಈ)</td><td>ರಾಯಚೂರು ಜಿಲ್ಲೆಯಲ್ಲಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶವನ್ನು ಬೆಳೆಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?</td><td>ಭಾರತೀಯ ಅರಣ್ಯ ಸಮೀಕ್ಷೆ, 2019ರ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ 2017 ರಿಂದ 2019ರ ಅವಧಿಯಲ್ಲಿ ಅರಣ್ಯ ಹೊದಿಕೆ 23 ಚದರ ಕಿ.ಮೀ ಹೆಚ್ಚಾಗಿರುತ್ತದೆ.<br><br>2019-20ನೇ ಸಾಲಿನಲ್ಲಿ ಅರಣ್ಯ ಪ್ರದೇಶ, ಸಂಸ್ಥೆಗಳ ಆವರಣ, ರಸ್ತೆ ಬದಿ, ನಗರ/ಪಟ್ಟಣ ಪ್ರದೇಶಗಳ ಒಟ್ಟು 1254.00 ಹೆಕ್ಟರ್ ಪ್ರದೇಶದಲ್ಲಿ ನೆಡುತೋಪು ಬೆಳೆಸಲಾಗಿದೆ. ಸಾರ್ವಜನಿಕರಿಗೆ ಒಟ್ಟು 4.025 ಲಕ್ಷ ಸಸಿಗಳನ್ನು ವಿತರಿಸಲಾಗಿದೆ. 2020-21ನೇ ಸಾಲಿನಲ್ಲಿ ಒಟ್ಟು 747.00 ಹೆಕ್ಟರ್ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಹಾಗೂ 4.46 ಲಕ್ಷ ಸಸಿಗಳನ್ನು ವಿತರಿಸುವ ಗುರಿ ಹೊಂದಲಾಗಿದೆ. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿಯಲ್ಲಿ ರೈತರಿಗೆ ಪ್ರೋತ್ಸಾಹಧನ ನೀಡಿ ಅರಣ್ಯೀಕರಣಕ್ಕೆ ಉತ್ತೇಜನ ನೀಡಲಾಗುತ್ತಿದೆ.</td></tr>
</table>

| | | |
|---|---|---|
| | | ರಾಯಚೂರು ಜಿಲ್ಲೆಯಲ್ಲಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶವನ್ನು ಬೆಳೆಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br><br>1) ಅರಣ್ಯ ಹೊದಿಕೆ ಮತ್ತು ವೃಕ್ಷ ಕವಚವನ್ನು ಹೆಚ್ಚಿಸುವ ಸಲುವಾಗಿ ಅರಣ್ಯೀಕರಣ ಕಾಮಗಾರಿಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಸದರಿ ಯೋಜನೆಯಡಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಮಾಡಲಾಗುತ್ತಿದೆ.<br><br>2) ವನಮಹೋತ್ಸವ ಕಾರ್ಯಕ್ರಮದಡಿ ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿಗಳ ಆವರಣದಲ್ಲಿ ಮತ್ತು ಸಂಘ ಸಂಸ್ಥೆಗಳ ಜಮೀನುಗಳಲ್ಲಿ ಸಸಿಗಳನ್ನು ನೆಡುವುದು ಮತ್ತು ಶಾಲೆ-ಕಾಲೇಜು ವಿದ್ಯಾರ್ಥಿಗಳು, ಸರ್ಕಾರೇತರ ಸಂಘ-ಸಂಸ್ಥೆ ಹಾಗೂ ಸಾರ್ವಜನಿಕರುಗಳ ಸಹಭಾಗಿತ್ವದಲ್ಲಿ ಸೂಕ್ತ ಸ್ಥಳಗಳಲ್ಲಿ ಬೀಜ/ಬೀಜದುಂಡೆಗಳನ್ನು ಬಿತ್ತನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಅರಣ್ಯದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>3)ರಸ್ತೆಯ ಇಕ್ಕೆಲಗಳಲ್ಲಿ ನೆಡುತೋಪು ಬೆಳೆಸುವ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ನೆರಳು ಒದಗಿಸಲಾಗುತ್ತಿದೆ. ಅಲ್ಲದೆ, ನೈಸರ್ಗಿಕ ಸಮತೋಲನವನ್ನು ಕಾಪಾಡಲಾಗುತ್ತಿದೆ.<br><br>4)ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರ/ಮುನಿಸಿಪಲ್/ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ ಎತ್ತರವಾದ ಸಸಿಗಳನ್ನು ನೆಡಲಾಗುತ್ತಿದೆ.<br><br>5) ರೈತರಿಗೆ/ಸಾರ್ವಜನಿಕರಿಗೆ/ಸಂಘ-ಸಂಸ್ಥೆಗಳಿಗೆ ಹೆಚ್ಚು ಹೆಚ್ಚು ಸಸಿಗಳನ್ನು ಬೆಳಸಲು ಉತ್ತೇಜಿಸುವ ಸಲುವಾಗಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರಿಯಾಯ್ತಿ ದರಗಳಲ್ಲಿ ಸಸಿಗಳನ್ನು ನೀಡಿ ಮೂರು ವರ್ಷಗಳಲ್ಲಿ ಬದುಕುಳಿದ ಪ್ರತಿ ಸಸಿಗೆ ರೂ.125/-ರಂತೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. |

ಸಂಖ್ಯೆ: ಅಪಜೀ 18 ಎಫ್‌ಎಎಫ್ 2020

29/02/2020

(ಆನಂದ್ ಸಿಂಗ್)

ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು